ಕನ್ನಡ ಸಂಘ ಸಂಸ್ಥೆಗಳ ಬಗ್ಗೆ

೩೯೬. ಶ್ರೀ ಪಟಿವಂಕ್ಕಿ ರತ್ನಾಕರ (ತೀರ್ಥಹಳ್ಳಿ)—ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೊರದೇಶದಲ್ಲಿನ ಹಾಗೂ ಹೊರ ರಾಜ್ಯದಲ್ಲಿರುವ ಎಷ್ಟು ಕನ್ನಡ ಸಂಘ ಸಂಸ್ಥೆಗಳಿಗೆ ರಾಜ್ಯ ಸರ್ಕಾರದವರು ಆರ್ಥಿಕ ನೆರವು ನೀಡಿದ್ದಾರೆ?

ಆ) ಹೊರ ರಾಷ್ಟ್ರದ ವಿಶ್ವವಿದ್ಯಾನಿಲಯವೊಂದರಲ್ಲಿ ಕನ್ನಡ ಪೀಠ ಸ್ಥಾಪನೆಗಾಗಿ ಸರ್ಕಾರದವರು ನೀಡಿರುವ ನೆರವಿನ ಪ್ರಮಾಣವೆಷ್ಟು ?

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ ಮತ್ತು ಪ್ರವಾಸೋದ್ಯಮ ಮಂತ್ರಿಗಳು).—

ಅ) ವಿವರಗಳು ಕೆಳಗಿನಂತಿವೆ :—

ವರ್ಷ	ಹೊರದೇಶದ ಕನ್ನಡ ಸಂಘ ಸಂಸ್ಥೆಗಳು ಆರ್ಥಿಕ ನೆರವು ಪಡೆದ ಸಂಖ್ಯೆ	ಹೊರ ರಾಜ್ಯದ ಕನ್ನಡ ಸಂಘ ಸಂಸ್ಥೆಗಳು ಆರ್ಥಿಕ ನೆರವು ಪಡೆದ ಸಂಖ್ಯೆ
೧೯೮೨-೮೩	—	೨
೧೯೮೩-೮೪	—	೩
೧೯೮೪-೮೫	—	೧೯
೧೯೮೫-೮೬	೧	೨೪
೧೯೮೬-೮೭	೧	೨೭
ಒಟ್ಟಿನಲ್ಲಿ	೨	೭೫

ಆ) ಇಂಥಹ ನೆರವನ್ನು ರಾಜ್ಯ ಸರ್ಕಾರವು ಇದುವರೆವಿಗೂ ನೀಡಿರುವುದಿಲ್ಲ.

ಶಹಬಾದ್ ಪಟ್ಟಣಕ್ಕೆ ನೀರು ಸರಬರಾಜು ಯೋಜನೆ ಬಗ್ಗೆ

೫೧೫. ಶ್ರೀ ಕೆ. ಶಿವಶರಣಪ್ಪ (ಶಹಾಬಾದ್).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಹಾಬಾದ್ ನಗರದಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮಂಡಳಿಯು ವತಿಯಿಂದ ಒಂದು ದೊಡ್ಡ ಜೃಹತ್ ಯೋಜನೆಯನ್ನು ತೆಗೆದುಕೊಂಡಿದ್ದು ಅದನ್ನು ಮಾನ್ಯ ಪುರಖ್ಯಮಂತ್ರಿಗಳು ೧೯೮೪ನೇ ವಿಪ್ರಿಲ್‌ನಲ್ಲಿ ಶಂಕುಸ್ಥಾಪನೆ ಮಾಡಿದ್ದು ಸರ್ಕಾರದವರ ಗಮನದಲ್ಲಿದೆಯೇ?

ಆ) ಹಾಗಿದ್ದಲ್ಲಿ ಈ ಯೋಜನೆಗೆ ತಗಲುವ ವೆಚ್ಚವೆಷ್ಟು ಮತ್ತು ಈಗಾಗಲೇ ಆ ಕೆಲಸಕ್ಕಾಗಿ ಖರ್ಚು ಮಾಡಿದ ಹಣವೆಷ್ಟು?

ಇ) ಈ ಯೋಜನೆ ಯಾವ ಹಂತದಲ್ಲಿ ಇದೆ ಮತ್ತು ಶಹಬಾದ್ ನಗರಕ್ಕೆ ಯಾವಾಗ ನೀರನ್ನು ಪೂರೈಸಲಾಗುವುದು?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ಇದೆ.

ಆ) ಅಂದಾಜು ವೆಚ್ಚ ೫೫.೦೦ ಲಕ್ಷ ರೂ.ಗಳು ವೆಚ್ಚವಾಗಿರುವುದು ೪೫.೬೫ಲಕ್ಷ ರೂಪಾಯಿಗಳು.